**1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು**

**ವಿಶೇಷ ಮೊಕದ್ದಮೆ ನಂಃ 74/2023**

| | | |
|---|---|---|
| ಸಾಕ್ಷಿದಾರರ ಹೆಸರು | - ಗೋಪಾಲ | ಪಿಡಬ್ಲ್ಯೂ- 03 |
| ತಂದೆಯ ಹೆಸರು | - ಕಾಳಯ್ಯ | ಸಿಡಬ್ಲ್ಯೂ - 04 |
| ವಯಸ್ಸು | - 35 ವರ್ಷ | |
| ಉದ್ಯೋಗ | - ಚಾಲಕ | |
| ವಾಸ ಸ್ಥಳ | - ಹೊಸಕೋಟೆ | |

ದಿನಾಂಕಃ 13-07-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

**1.** ಆರೋಪಿ ಗೊತ್ತು. ಚಾಸಾ.1 ರಿಂದ ಚಾಸಾ.3 ಮತ್ತು ಚಾಸಾ.5 ರವರು ಗೊತ್ತು. ಸುಮಾರು 4 ವರ್ಷಗಳ ಹಿಂದೆ ರಾತ್ರಿ 8.30 ರಿಂದ 9 ಗಂಟೆಯ ಸುಮಾರಿಗೆ ಬೀಡಿ ತರಲು ಮೂರ್ತಿರಾಜ್ ಎಂಬುವವರ ಅಂಗಡಿಯ ಬಳಿ ಹೋದಾಗ ಸೋಮೆಗೌಡರ ಮನೆಯ ಮುಂದೆ ಜೋರಾಗಿ ಜಗಳವಾಗುತ್ತಿತ್ತು. ಏನಾಗುತ್ತಿದೆ ಎಂದು ನೋಡಲು ಹೋದಾಗ ಆರೋಪಿ ಮತ್ತು ಚಾಸಾ.1 ರವರ ನಡುವೆ ಜಗಳವಾಗುತ್ತಿತ್ತು. ಆರೋಪಿ ಚಾಸಾ.1 ರವರಿಗೆ ಕಟ್ಟಿಗೆಯಿಂದ ಹೊಡೆಯುತ್ತಿದ್ದ ಮತ್ತು ತಾನು ಚಾಸಾ.1 ರವರಿಗೆ ಕೂಲಿ ಹಣ ಕೊಟ್ಟಿಲ್ಲವೆಂದು ಎಲ್ಲರ ಬಳಿ ಹೇಳುತ್ತಾ ಬಂದಿದ್ದೀಯಲ್ಲ ಹೊಲೆಯ ಮಾದಿಗ ಎಂದು ಜಾತಿ ಸೇರಿಸಿ ಬೈಯುತ್ತಿದ್ದನು. ಆರೋಪಿ ಚಾಸಾ.1 ರವರ ಬಲಕೈಗೆ ಹೊಡೆದು ರಕ್ತಗಾಯವಾಗಿರುತ್ತದೆ. ಆರೋಪಿ ಚಾಸಾ.1 ರವರಿಗೆ ಹೊಟ್ಟೆಗೆ ಸಹ ಹೊಡೆದಿರುತ್ತಾನೆ.

**2.** ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಆರೋಪಿ ಕಟ್ಟಿಗೆಯನ್ನು ಅಲ್ಲೇ ಬಿಸಾಡಿ ಓಡಿ ಹೋಗಿರುತ್ತಾನೆ. ಚಾಸಾ.1 ಕೆಳಗೆ ಬಿದ್ದಿದ್ದ. ನಂತರ

ನಾನು ಚಾಸಾ.5 ರವರಿಗೆ ನನ್ನ ಬೈಕ್ ತರುವಂತೆ ಹೇಳಿ ಆತ ಬೈಕ್ ತೆಗೆದುಕೊಂಡ ಬಂದ ನಂತರ ಚಾಸಾ.1 ರವರನ್ನು ನನ್ನ ಮತ್ತು ಚಾಸಾ.5 ರವರ ನಡುವೆ ಬೈಕಿನಲ್ಲಿ ಕೂರಿಸಿ ನಾನು ಬೈಕನ್ನು ಚಾಲನೆ ಮಾಡಿಕೊಂಡು ಚಿಕ್ಕಮಗಳೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಈ ವಿಷಯವನ್ನು ಡಿ.ವೈ.ಎಸ್.ಪಿ. ರವರ ಮುಂದೆ ಹೇಳಿರುತ್ತೇನೆ. ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ದೊಣ್ಣೆಯನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲು: ಆರೋಪಿತರ ಪರವಾಗಿ ಶ್ರೀ ಡಿ.ಸಿ.ಪಿ. ವಕೀಲರಿಂದಃ-</u>

3. ನಾನು ಚಾಲಕ ವೃತ್ತಿ ಮಾಡಿಕೊಂಡಿದ್ದೇನೆ. ಘಟನೆಯ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಬರುವುದಿಲ್ಲ. ಗಲಾಟೆಯು ರಾತ್ರಿ 8.30 ರಿಂದ 9 ಗಂಟೆಯ ಅವಧಿಯಲ್ಲಿ ಆಗಿರುತ್ತದೆ. ಗಲಾಟೆಯಾಗಿದೆ ಎಂದು ನನಗೆ ಯಾರು ಹೇಳಿರಲಿಲ್ಲ, ಬೀಡಿ ತರಲು ಹೋದಾಗ ನನಗೆ ಗೊತ್ತಾಗಿರುತ್ತದೆ. ಗಲಾಟೆ ನಡೆದಿದೆ ಎಂದು ಹೇಳಲಾದ ಸ್ಥಳದ ಪಕ್ಕದಲ್ಲಿ ಮೂರ್ತಿರಾಜ್ ಎನ್ನುವವರ ಅಂಗಡಿ ಇರುತ್ತದೆ. ಅಂಗಡಿಯಲ್ಲಿ ಬೇರೆ ಯಾರು ಇರಲಿಲ್ಲ. ನನಗೆ ಬೀಡಿಯನ್ನು ನೀಡಿದ್ದರು. ಸದರಿ ಅಂಗಡಿಯಿಂದ ಗಲಾಟೆಯಾಗಿದೆ ಎಂದು ಹೇಳುವ ಸ್ಥಳ 50 ಅಡಿ ದೂರದಲ್ಲಿರುತ್ತದೆ.

4. ನಾನು ಸ್ಥಳಕ್ಕೆ ಹೋದಾಗ ಚಾಸಾ.1 ಮತ್ತು ಆರೋಪಿ ಇಬ್ಬರೇ ಇದ್ದರು. ಗಲಾಟೆಯಾಗಿದೆ ಎಂದು ಹೇಳುವ ಸ್ಥಳದ ಎರಡು ಬದಿಗಳಲ್ಲಿ ಬೇರೆ ವಾಸದ ಮನೆಗಳು ಇರುತ್ತವೆ. ಆ ಮನೆಗಳಲ್ಲಿ ವಾಸಿಸುತ್ತಿದ್ದವರು ಯಾರು ಗಲಾಟೆಯ ಸಂದರ್ಭದಲ್ಲಿ ಸ್ಥಳದಲ್ಲಿ

ಇರಲಿಲ್ಲ. ಹೊಸಕೋಟೆಯಲ್ಲಿ ಸುಮಾರು 350 ಮನೆಗಳು ಇರುತ್ತವೆ ಎಂದರೆ ಸರಿ.

5. ಚಾಸಾ.1 ರವರು 8-10 ವರ್ಷಗಳಿಂದ ಆರೋಪಿಯ ಬಳಿ ಟ್ರ್ಯಾಕ್ಟರ್ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ಆಗ ಅವರು ಚೆನ್ನಾಗಿಯೇ ಇದ್ದರು ಎಂದರೆ ಸರಿ. ಗಲಾಟೆಯಾಗಿ ಎಷ್ಟು ಸಮಯದ ನಂತರ ನಾನು ಸ್ಥಳಕ್ಕೆ ಹೋದೆ ಎಂದರೆ ಗಲಾಟೆಯಾಗುತ್ತಿದ್ದನ್ನು ಕೇಳಿ ನಾನು ಸ್ಥಳಕ್ಕೆ ಹೋಗಿರುತ್ತೇನೆ. ನಾನು ಗಲಾಟೆಯನ್ನು ಬಿಡಿಸಿರುವುದಿಲ್ಲ. ಅವರಿಬ್ಬರ ನಡುವೆ ಆದ ಮಾತುಕತೆಯ ಬಗ್ಗೆ ನನಗೆ ಗೊತ್ತಿದೆಯೋ ಎಂದರೆ ಆರೋಪಿ ಆತನಿಗೆ ಬೈಯುತ್ತಿದ್ದ.

6. ಮು.ಮಾ.1 ನ್ನು ದಡಿ ಎನ್ನುತ್ತಾರೆ. ದಡಿ ಎಂದರೆ ಸುಮಾರು ಅರ್ಧ ಅಡಿ ಅಗಲ ಇರುತ್ತದೆ ಎಂದರೆ ಸರಿ. ಮು.ಮಾ.1 ನ್ನು ಕೋಲು ಎನ್ನುತ್ತಾರೆ ಎಂದರೆ ಸರಿ. ಆರೋಪಿ ದಡಿ ಬಳಸಿದ್ದರೋ ಅಥವಾ ಕೋಲನ್ನು ಬಳಸಿದ್ದರೋ ಎಂದರೆ ಮು.ಮಾ.1 ದಡಿಯನ್ನೇ ಬಳಸಿದ್ದರು. ಮು.ಮಾ.1 ನ್ನು ಅದೇ ದಿನ ಬಳಸಲಾಗಿತ್ತು ಎನ್ನುವುದನ್ನು ಸಾಬೀತು ಪಡಿಸುವ ಸಲುವಾಗಿ ಅದರ ಮೇಲೆ ವಿಶೇಷವಾದ ಗುರುತುಗಳು ಇಲ್ಲ ಎಂದರೆ ಸರಿ. ಮು.ಮಾ.1 ರಂತಹವುಗಳು ನಮ್ಮ ಊರಿನಲ್ಲಿ ಸಾಕಷ್ಟು ಸಿಗುತ್ತದೆ ಎಂದರೆ ಸರಿ. ಮು.ಮಾ.1 ನ್ನು ಚಾಸಾ.1 ರವರು ಪೊಲೀಸ್ ಠಾಣೆಗೆ ಹೋಗಿ ನೀಡಿರುತ್ತಾರೆ ಎಂದರೆ ಸರಿ.

7. ನಿಪಿ.3 ರಲ್ಲಿ ಸೋಮೆಗೌಡರ ಮನೆ ಕಂಡುಬರುವುದಿಲ್ಲ. ಬೈಕ್ ನಂಬರನ್ನು ನಾನು ಮರೆತಿರುತ್ತೇನೆ. ಚಾಸಾ.1 ನನ್ನ ತಾಯಿಯ ಅಕ್ಕನ ಮಗ ಎಂದರೆ ಸರಿ. ಚಾಸಾ.5 ರವರು ಚಾಸಾ.1 ರವರ ಅಣ್ಣ ಎಂದರೆ ಸರಿಯಲ್ಲ. ಆದರೆ ಪಕ್ಕದ ಮನೆಯವರು. ಚಾಸಾ.3 ರವರು

ಚಾಸಾ.1 ರವರ ತಾಯಿಯ ತಮ್ಮನ ಮಗ ಎಂದರೆ ಸರಿಯಲ್ಲ. ಚಾಸಾ.2 ರವರು ಚಾಸಾ.1 ರವರ ಮಾವನ ಮಗ.

8. ಚಾಸಾ.1 ರವರು ಇತರರ ಮೇಲೆ ಇದೇ ರೀತಿಯ ಜಾತಿ ನಿಂದನೆ ಪ್ರಕರಣಗಳನ್ನು ದಾಖಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅವುಗಳಲ್ಲಿ ನಾನು ಸಾಕ್ಷಿದಾರ ಎಂದರೆ ಸರಿಯಲ್ಲ. ಮೊನ್ನೆ ನಡೆದ ಜಾತಿ ನಿಂದನೆ ಪ್ರಕರಣದಲ್ಲಿ ನಾನು ಸಾಕ್ಷಿದಾರನಾಗಿರುವುದಿಲ್ಲ. ಚಾಸಾ.1 ರಿಂದ 3 ರವರು ಸೇರಿಕೊಂಡು ನಮ್ಮೂರಿನ 23 ಜನರ ಮೇಲೆ ಜಾತಿ ನಿಂದನೆ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

9. ಈ ಪ್ರಕರಣದ ಕುರಿತು ನಾನು ಹೇಳಿಕೆ ನೀಡಿರುತ್ತೇನೆ. ನಾನು ಹೇಳಿದಂತೆ ಯಾವುದೇ ಗಲಾಟೆಯಾಗಿರುವುದಿಲ್ಲ ಮತ್ತು ಆರೋಪಿಯಿಂದ ಹೆಚ್ಚಿನ ಹಣವನ್ನು ವಸೂಲಿ ಮಾಡಿಕೊಳ್ಳುವ ಸಲುವಾಗಿ ಚಾಸಾ.1 ರವರು ಸುಳ್ಳು ದೂರನ್ನು ಸಲ್ಲಿಸಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.1 ಬಿದ್ದು ಏಟು ಮಾಡಿಕೊಂಡು ಚಿಕಿತ್ಸೆ ಪಡೆದುಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಾವೆಲ್ಲರೂ ಸಂಬಂಧಿಕರಾಗಿರುವುದರಿಂದ ಚಾಸಾ.1 ರವರ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿಕ್ಕಮಗಳೂರು.

ಸಾಕ್ಷಿಯ ಸಹಿ